ವಾರದ ಪತ್ರ

## ಮನರಂಜನೆ ನೀಡದ 'ಮಜಾ ಭಾರತ'

ಪ್ರತಿ ದಿನ ಸಾಕಷ್ಟು ಧಾರಾವಾಹಿಗಳು ಎಲ್ಲಾ ವಾಹಿನಿಗಳಲ್ಲೂ ಪ್ರಸಾರವಾಗುತ್ತಿವೆ. ಈ ಹಿಂದೆ ಝೀ ಕನ್ನಡದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ ಪ್ರಸಾರವಾಗುತ್ತಿದ್ದ 'ಕಾಮಿಡಿ ಕುಟುಂಬ' ಮತ್ತು 'ಕಿಲಾಡಿ ಕುಟುಂಬ' ತುಂಬಾ ಚೆನ್ನಾಗಿ ಮೂಡಿ ಬರುತ್ತಿತ್ತು. ಅದರಲ್ಲಿ ಪಾತ್ರವಹಿಸುತ್ತಿದ್ದ ಎಲ್ಲ ಕಲಾವಿದರೂ ತುಂಬಾ ಚೆನ್ನಾಗಿ ಅಭಿನಯಿಸಿ, ಹಿರಿಯ ಕಲಾವಿದರಿಂದ ಹಾಗೂ ಪ್ರೇಕ್ಷಕರಿಂದ ಪ್ರಶಂಸೆಯನ್ನು ಗಳಿಸಿದ್ದರು. ಆದರೆ, ಈಗ ಕಲರ್ ಸೂಪರ್‌ನಲ್ಲಿ ಪ್ರತಿದಿನ ಪ್ರಸಾರವಾಗುತ್ತಿರುವ 'ಮಜಾ ಭಾರತ'ದ ಕಲಾವಿದರು ತಮ್ಮ ಅಭಿನಯಕ್ಕಿಂತ 'ದ್ವಂದ್ವಾರ್ಥ' ಮಾತುಗಳನ್ನಾಡುವುದರಲ್ಲಿ ಹೆಚ್ಚು ಗಮನ ಕೊಡುತ್ತಿದ್ದಾರೆ. ಮಹಿಳೆಯರ ಪಾತ್ರವನ್ನು ಕೆಲವೊಮ್ಮೆ ನೋಡುವುದಕ್ಕೆ ಬೇಸರವಾಗುತ್ತದೆ. ಇನ್ನು 'ಮಜಾ ಭಾರತ'ದ ನಿರೂಪಕಿ ಅನುಪಮಗೌಡ, ಗುರುಕಿರಣ್ ಮತ್ತು ರಚಿತಾ ರಾಮ್ ಅವರ ಹೆಸರನ್ನು ಕೆಟ್ಟದಾಗಿ ಕರೆಯುತ್ತಾರೆ. ಜನಪ್ರಿಯ ನಟಿ ರಚಿತಾರಾಮ್ ಅವರ ಹೆಸರನ್ನು 'ರಚ್ಚಿ... ರಚ್ಚಿ' ಎಂದು ಕರೆಯುತ್ತಾರೆ. ಅದು ಕೇಳಲು ಚೆನ್ನಾಗಿರುವುದಿಲ್ಲ.

—ಸಿ.ಎಸ್. ರಾಜೇಂದ್ರ, ಮೈಸೂರು

## ಸರ್ವಧರ್ಮ ಸಮನ್ವಯ

ಟೀವಿಗಳಲ್ಲಿ ಜ್ಯೋತಿಷಿಗಳ ಪ್ರವಚನ ಬೆಳಿಗ್ಗೆ 6 ಗಂಟೆಯಿಂದ ಶುರು. ಧರ್ಮಗಳ ಕಟ್ಟುಕತೆ, ಕಟ್ಟುಪಾಡು, ಪವಾಡ, ಪರಲೋಕದ ಪ್ರಲೋಭನೆಗಳು, ಫಲಗಳ ಆಮಿಷ ಮುಂತಾದವುಗಳ ಜನರ ಅತಿ ಆಸೆಗೆ, ಪುಣ್ಯ ಪ್ರಾಪ್ತಿಗೆ ಪ್ರೇರಕವಾಗಿವೆ. ಆದರೆ ಬುದ್ಧನ ಬೋಧನೆಯನ್ನು ಗಮನಿಸಿದರೆ ಅಲ್ಲಿ ಈ ಯಾವ ಅಂಶಕ್ಕೂ ಪ್ರಾಮುಖ್ಯತೆ ಇದ್ದಂತೆ ತೋರುವುದಿಲ್ಲ. ತೀಕ್ಷ್ಣವಾಗಿ ಖಂಡಿಸುತ್ತೇನೆ ಮತ್ತು ನಡೆಸದೇ ಹೋದರೆ ನರಕ ಕೂಪದಲ್ಲಿ ಬೀಳಬೇಕಾಗಬಹುದು ಎಂದು ಹೆದರಿಸುವುದೂ ಇಲ್ಲ.

ಸರ್ವಧರ್ಮ ಸಮನ್ವಯವನ್ನು ಸಾರಿದ ಬುದ್ಧನನ್ನು ಆದಿಶಂಕರಾಚಾರ್ಯರು ಗೌರವಿಸಿದ್ದಾರೆ. ಅತಿ ಆಸೆ, ದ್ವೇಷ, ಕೊಲೆ, ಜಾತಿಯ ಜಗಳ ಹೆಚ್ಚಾಗುವುದು ರಾಜಕೀಯದಲ್ಲಿ. ಜ್ಯೋತಿಷಿಗಳಿಂದ. ಆದರೆ ಇಂತಹ ಕಾರ್ಯಕ್ರಮದಲ್ಲಿ ಜನರ ಮನಸ್ಸಿಗೆ ಒಳ್ಳೆಯ ಸರಳವಾದ ವಿಚಾರವನ್ನೂ ತಿಳಿಸಿ ಹೇಳುವ ಕೆಲಸವನ್ನು ಟೀವಿ ಮಾಡಲಿ ಎಂದು ಆಶಿಸೋಣವೆ?

—ವೀಣಾ ಶಂಕರ್, ಬೆಂಗಳೂರು

## ಸಂತೋಷವಾಯಿತು

ಕಲರ್ಸ್‌ನ 'ಪದ್ಮಾವತಿ' ಸುಖಾಂತ್ಯಗೊಂಡಿದ್ದು ತುಂಬಾ ಸಂತೋಷವಾಯಿತು. ಮಧ್ಯದಲ್ಲಿ ಕೆಲವೊಮ್ಮೆ ಬೇಸರ ಮೂಡಿಸಿದರೂ ಅಂತ್ಯವು ಸುಖಕರವಾಗಿತ್ತು. ಕಲಾವಿದರಾದ ಸಾಮ್ರಾಟ್ (ತ್ರಿವಿಕ್ರಮ್), ತುಳಸಿ (ದೀಪ್ತಿ), ಸಾಧನಾ (ಮೇಘಶ್ರೀ), ಸುಪ್ರಭಾ (ಸ್ವಪ್ನರಾಜ್), ಆವಂತಿಕಾ (ನಂದಿನಿ), ವಸುಂಧರ (ಅಶ್ವಿನಿಗೌಡ), ವಿಕ್ರಂ (ರಕ್ಷಿತ್) ಹೀಗೆ ಎಲ್ಲಾ ಕಲಾವಿದರೂ ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಕನ್ನಡ ಚಿತ್ರರಂಗದ ಹಿರಿಯ ತಾರೆ ಎಂ.ಎನ್. ಲಕ್ಷ್ಮೀದೇವಿಯವರು ಸಹ ಉತ್ತಮವಾಗಿ ಅಭಿನಯಿಸಿದ್ದಾರೆ. 'ಪದ್ಮಾವತಿ' ಧಾರಾವಾಹಿಯನ್ನು ನಿರ್ದೇಶಿಸಿದ ನಿರ್ಮಲಾ ಚೆನ್ನಪ್ಪ ಅಭಿನಂದನಾರ್ಹರು.

—ದೇವಕಿ ಚಾಮರಾಜ ಅರಸ್, ಮೈಸೂರು

## ಮೊಬೈಲ್‌ನಲ್ಲೂ ನೋಡುವಂತಾಗಲಿ

ಚಂದನ ವಾಹಿನಿಯಲ್ಲಿ ಡಾ. ನಾ. ಸೋಮೇಶ್ವರ ಅವರು ನಡೆಸಿಕೊಡುತ್ತಿರುವ 'ಥಟ್ ಅಂತ ಹೇಳಿ' ಕಾರ್ಯಕ್ರಮ ಜನಾಕರ್ಷಣೆಯನ್ನು ಹೆಚ್ಚಿಸಿಕೊಳ್ಳುತ್ತಿರುವುದು ಸಂತೋಷದ ವಿಷಯ. ಇತ್ತೀಚೆಗೆ ವೀಕ್ಷಕರ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಟ್ಟಿರುವುದು ಹಾಗೂ ಕರ್ನಾಟಕವನ್ನು ಆಳಿದ ರಾಜವಂಶರುಗಳನ್ನು ಪರಿಚಯಿಸುತ್ತಿರುವುದು ಅಭಿನಂದನೀಯ. ಪ್ರತಿದಿನ ಶನಿವಾರ, ಭಾನುವಾರ ಹೊರತುಪಡಿಸಿ ರಾತ್ರಿ 9.30ಕ್ಕೆ ಟೀವಿ ಮುಂದೆ ಹಾಜರಾಗುತ್ತೇನೆ. ಮರುದಿನ ಮಧ್ಯಾಹ್ನ 12.30ಕ್ಕೆ ಮರು ಪ್ರಸಾರ ಉಂಟು. ಅನೇಕ ಭಾರಿ ರಾತ್ರಿ ಹಾಗೂ ಮಧ್ಯಾಹ್ನದ ಪ್ರಸಾರವನ್ನು ಕಾರಣಾಂತರಗಳಿಂದ ನೋಡಲಾಗುವುದಿಲ್ಲ. ಏನೋ ಕಳೆದುಕೊಂಡಂತಹ ಭಾವನೆ ಮನಸ್ಸಿಗೆ ಉಂಟಾಗುತ್ತದೆ. ಹಾಗಾಗಿ ಇಂದಿನ ಪ್ರಸಾರವನ್ನು ಮರುದಿನವೇ ಮೊಬೈಲ್‌ನಲ್ಲಿ ನೋಡುವಂತಹ ಅವಕಾಶವನ್ನು ಕಲ್ಪಿಸಿಕೊಡಲಿ ಎಂಬುದೇ ನನ್ನ ಮಹದಾಸೆ.




—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಇನ್ನೂ ಟೀವಿ ಬೇಕು

ನಮ್ಮ ಕನ್ನಡ ಟೀವಿ ವೀಕ್ಷಕರಿಗೆ ಹೊಸ ವಾಹಿನಿಗಳ ಅವಶ್ಯಕತೆ ಇದೆ.

1. ಸರಿಯಾದ ಕನ್ನಡ ಉಚ್ಚಾರ ಕಲಿಸಲು ಇದು ಹಲವು ಕಲಾವಿದರಿಗೆ ಮತ್ತು ಅವರ ನಟನೆ ತಿದ್ದುವ ನಿರ್ದೇಶಕರಿಗೆ. ಅವರಿಗೇ ಭಾಷೆಯ ಉಚ್ಚಾರ ತಿಳಿಯದ್ದರಿಂದ ಅವರು ಕಲಾವಿದರಿಗೆ ಹೇಗೆ ಸರಿ ಮಾಡಲು ಸಾಧ್ಯ?

2. ಕೊಲೆ, ಸುಲಿಗೆ, ದ್ವೇಷ ಸಾಧನೆ ಬಹುತೇಕ ಧಾರಾವಾಹಿಗಳಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಇದು ಹೇಗಿದೆಯೆಂದರೆ ನಮ್ಮ ನಾಗರಿಕ ಸಮಾಜ ಇಂತಹದಕ್ಕೆ ಪರಿವರ್ತನೆಯಾಗುವ ಕಾಲ ದೂರವಿಲ್ಲ. ಇದು ಬೇಗ ಆಗಬೇಕೆಂದರೆ ಅದನ್ನು ಹೇಳಿಕೊಡುವ ಒಂದು ವಾಹಿನಿ ಅತ್ಯವಶ್ಯ. ಇದನ್ನು ಹೇಳಿಕೊಡಲು ಇಂತಹ ಸಂಭಾಷಣೆಗಳ ಬರಹಗಾರರು ಅದಕ್ಕೆ ಉತ್ತೇಜನ ನೀಡುವ ನಿರ್ದೇಶಕರು ಮತ್ತು ಅಂತಹ ಪಾತ್ರಗಳಲ್ಲಿ ನಟಿಸುವ ಕೆಲ ಕಲಾವಿದರು ಸಾಕು. ಈಗ ಬರುತ್ತಿರುವುದನ್ನು ನೋಡಿದರೆ ಸಾಲದೇ? ಎಂದರೆ ಇಲ್ಲ. ಅವರೆಲ್ಲ ಪಣ ತೊಟ್ಟಂತೆ ಇಂತಹುವಕ್ಕೇ ಹೆಚ್ಚು ಒತ್ತು ಕೊಡುತ್ತಿರುವುದನ್ನು ನೋಡಿದರೆ ಈ ವಿಶೇಷ ವಾಹಿನಿಯಲ್ಲಿ ಒಂದು ದೈನಂದಿನ ತರಗತಿ ಬೇಕೇ ಬೇಕು ಅಲ್ಲವೇ?

—ಕೆ.ಎಸ್. ಸೋಮೇಶ್ವರ ಬೆಂಗಳೂರು

## ಹುಡುಗರ ಸಹನೆಯ ಪರೀಕ್ಷೆ

ಕನ್ನಡದ ಸುದ್ದಿ ವಾಹಿನಿಗಳು ಗುಣಮಟ್ಟ, ರೋಚಕಗೊಳಿಸಲು ಟ್ಯಾಬ್ಲಾಯಿಡ್ ಮಾದರಿಯನ್ನೇ ಹೆಚ್ಚಾಗಿ ಅನುಸರಿಸುತ್ತಿರುವುದು ಕಂಡುಬರುತ್ತಿದೆ. ಅನಗತ್ಯ ಪ್ರಶ್ನೆಗಳನ್ನು ಸೃಷ್ಟಿಸಿಕೊಂಡು, ಕೆಲವೇ ಕ್ಷಣಗಳಲ್ಲಿ ಉತ್ತರ ಕೊಡುತ್ತೇವೆ ಎನ್ನುತ್ತ ನೋಡುಗರ ಸಹನೆಯ ಪರೀಕ್ಷೆಯನ್ನು ಮಾಡುತ್ತಿವೆ. ಪಬ್ಲಿಕ್ ಟೀವಿಯಲ್ಲಿ ಸೋಮವಾರ ರಾತ್ರಿ (ಮೇ 27) ಪೊಲೀಸ್ ಅಧಿಕಾರಿ ಅಣ್ಣಾಮಲೈ ಅವರ ರಾಜೀನಾಮೆಯ ಕುರಿತಂತೆ ಪ್ರಸಾರ ಮಾಡಿದ ಸುದ್ದಿ ಇದಕ್ಕೆ ನಿದರ್ಶನ. ಕೊನೆಯವರೆಗೆ ಕಾದರೂ ನಿರೂಪಕಿಯೇ ಕೇಳಿಕೊಂಡ ಯಾವ ಪ್ರಶ್ನೆಗಳಿಗೂ ನಿಖರವಾದ ಉತ್ತರ ಸಿಗಲೇ ಇಲ್ಲ. ಒಂದು ರೀತಿಯಲ್ಲಿ ಸಂತೆ– ಬೀದಿಯಲ್ಲಿ 'ಆಟದ ಕೊನೆಗೆ ಜುಟ್ಟು ಕಾಳಿಂಗ ತೋರಿಸ್ತೇನೆ' ಎನ್ನುವ ಹಾವಾಡಿಗನ ಶೈಲಿಯನ್ನು 'ನಮ್ಮಲ್ಲಿ ಮಾತ್ರ ಮಹಾ ಸ್ಫೋಟಕ ಸುದ್ದಿ' ಎನ್ನುವ ಉದ್ಘಾರದ ಘೋಷಣೆ ನೆನಪು ಆಗುವಂತೆ ಮಾಡಿತು.

—ಕೆ.ವಿ. ಮಂಜುನಾಥ್, ಕುಂಟುಗೋಡು